**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 32/2022**

**ಚಾ.ಸಾ. :-1**
**ಪ್ರಾ.ಸಾ. :-1**

ಹೆಸರು : ನಾಗೇಂದ್ರ.ಸಿ

ತಂದೆಯ ಹೆಸರು : ಚಿಕ್ಕತಮ್ಮೇಗೌಡ

ವಯಸ್ಸು : 48 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬಾಬುರಾಯನಕೊಪ್ಪಲು

---

**ಪ್ರಮಾಣೀಕರಿಸಲಾದ ದಿನಾಂಕಃ- 08.09.2025**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ಮೋಟೇಗೌಡರು ನನ್ನ ಮಾವನಾಗಿದ್ದು, ಅವರಿಗೆ ದಿನಾಂಕಃ 04.06.2022 ರಂದು ಬೆಳಿಗ್ಗೆ 9.50 ರ ಸಮಯದಲ್ಲಿ RMC Check Post ಬಳಿ ಶ್ರೀರಂಗಪಟ್ಟಣದಲ್ಲಿ ಅಪಘಾತವಾಗಿರುತ್ತದೆ. ನನ್ನ ಮಾವನವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದು ಅವರಿಗೆ KSRTC Bus ಡಿಕ್ಕಿಪಡಿಸಿ ಅಪಘಾತವಾಗಿದ್ದು, ಆ ಬಗ್ಗೆ ನಮ್ಮ ಊರಿನವರಾದ ಚಾ.ಸಾ-2 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿ ಅವರನ್ನು ನೋಡಿರುತ್ತೇನೆ. ಅವರಿಗೆ ಬೆನ್ನು ಮೂಳೆ ಮತ್ತು ಇತರೇ ಜಾಗಗಳಲ್ಲಿ ತೀವ್ರವಾದ ಗಾಯಗಳಾಗಿತ್ತು.

ಆ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು. ನಂತರ ಚಿಕಿತ್ಸೆ ಫಲಕಾರಿಯಾಗದೇ ಸದರಿಯವರು ಸುಮಾರು 5-6 ದಿನಗಳ ನಂತರ ಮೃತಪಟ್ಟಿರುತ್ತಾರೆ.

ಆ ಬಗ್ಗೆ ನಾನು ಪೊಲೀಸರಿಗೆ ಮತ್ತೊಮ್ಮೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಆ ದಾಖಲೆಯು ಮರು ದೂರಾಗಿದ್ದು ಅದನ್ನು ಈಗ ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಅಪಘಾತ ಹೇಗೆ ಆಗಿರುತ್ತದೆ ಎಂದು ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸರಿ. ಮಾವನವರು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ಅವರ ಬಾಮೈದುನನಿಗೆ ಸೇರಿತ್ತು. ಮಂಡ್ಯದಿಂದ ಶ್ರೀರಂಗಪಟ್ಟಣಕ್ಕೆ ಬರುವಾಗ ಸರ್ಕಲ್ ಇದ್ದು ಅಲ್ಲಿ ಶ್ರೀರಂಗಪಟ್ಟಣಕ್ಕೆ ಹೋಗಲು ಬಲಭಾಗಕ್ಕೆ ತಿರುಗಬೇಕು ಎಂದರೆ ಸರಿ. ಶ್ರೀರಂಗಪಟ್ಟಣಕ್ಕೆ ಹೋಗಲು ಕಿರಂಗೂರು ಬಳಿಯೂ ಸಹ ಒಂದು ತಿರುವು ಇರುತ್ತದೆ ಎಂದರೆ ಸರಿ. ಕಿರಂಗೂರು ಬಳಿ ತಿರುವು ಇರುವುದರಿಂದ ಅಪಘಾತ ಸ್ಥಳದ ಮೂಲಕ ಶ್ರೀರಂಗಪಟ್ಟಣಕ್ಕೆ ಹೋಗುವ ಅವಶ್ಯಕತೆ ಇರುವುದಿಲ್ಲ ಎಂದರೆ ಸಾಕ್ಷಿ ಆ ದಿನ ಒಂದು ಧಾರ್ಮಿಕ ಕಾರ್ಯಕ್ರಮ ಇದ್ದ ಕಾರಣ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿದ್ದರು, ಹಾಗಾಗಿ ಸದರಿಯವರು ಆ ರಸ್ತೆ ಮೂಲಕವೇ ಹೋಗಿದ್ದರು. ದೂರಿನಲ್ಲಿ ಆ ದಿನ ಬಂದ್ ಇದ್ದ ಬಗ್ಗೆ ನಮೂದು ಇಲ್ಲ. ನಾನು ಸಹ ಆ ದಿನ ಶ್ರೀರಂಗಪಟ್ಟಣಕ್ಕೆ ಬಂದಿದ್ದು, ಬಂದ್ ಇದ್ದ ಬಗ್ಗೆ ನನಗೂ ಗೊತ್ತಿದ್ದು, ಆ ದಿನ ನಾನು ಬೇರೆ ರಸ್ತೆ ಮೂಲಕ ಹೋಗಿರುತ್ತೇನೆ. ಚಾ.ಸಾ-2, 4 ಹಾಗೂ 5 ರವರು ನಮ್ಮ ಊರಿನವರು, ಪರಿಚಯ. ಸದರಿಯವರು ನನ್ನ ಸ್ನೇಹಿತರು, ಕಷ್ಟಸುಖಕ್ಕೆ ಭಾಗಿಯಾಗುತ್ತಾರೆ. ದೂರಿನಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆಯದಿದ್ದರೂ ನಾನು ಮತ್ತು ಚಾ.ಸಾ-2 ರವರು ಸೇರಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೃತರು ಚಲಾಯಿಸುತ್ತಿದ್ದ ವಾಹನ ಅಂಗವಿಕಲರು ಚಾಲನೆ ಮಾಡುವಂತಹ ವಾಹನ ಎಂದರೆ ಗೊತ್ತಿಲ್ಲ.

**2.** ನನ್ನ ಮಾವನವರಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನವರಿಗೆ ದ್ವಿಚಕ್ರ ವಾಹನ

ಚಾಲನೆ ಮಾಡಲು ಚಾಲನಾ ಪರವಾನಗಿ ಇರಲಿಲ್ಲ ಹಾಗಾಗಿ ಅವರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದ್ವಿಚಕ್ರ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಗೊತ್ತಿಲ್ಲ. ಆರೋಪಿ ನಿರ್ಲಕ್ಷ್ಯತನದಿಂದ ಅಪಘಾತ ಮಾಡದಿದ್ದರೂ ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**